# ಎಫ್‌ಬಿ ಜಾಹೀರಾತು ಕಿರಿಕಿರಿಗೆ ಬಂತು ಕಡಿವಾಣ



**ಫೀಚರ್ ಬಳಕೆ ಹೇಗೆ?**

- ಫೇಸ್‌ಬುಕ್ ಖಾತೆ ತೆರೆದು, ಬಲ ಭಾಗದಲ್ಲಿ ಕಾಣಿಸುವ ಮೂರು ಗೆರೆಗಳಿರುವ ಮೆನು ಆಯ್ಕೆ ಮಾಡಿರಿ.
- ಸೆಟ್ಟಿಂಗ್ಸ್ ಮತ್ತು ಪ್ರೈವಸಿ ಆಯ್ಕೆ ಸೆಲೆಕ್ಟ್ ಮಾಡಿರಿ.
- ನಂತರ ಸೆಟ್ಟಿಂಗ್ಸ್ ಆಯ್ಕೆಯನ್ನು ಒತ್ತಿರಿ.
- ತೆರೆದುಕೊಳ್ಳುವ ಪೇಜ್ ಅನ್ನು ಸ್ಕ್ರಾಲ್ ಮಾಡಿದರೆ 'ಆಫ್ ಫೇಸ್‌ಬುಕ್ ಆಕ್ಟಿವಿಟಿ' ಆಯ್ಕೆ ಕಾಣುತ್ತದೆ.
- ಅದನ್ನು ಕ್ಲಿಕ್ಕಿಸಿ, ಆಗ ನೀವು ಭೇಟಿ ನೀಡಿದ ತಾಣಗಳ ಮಾಹಿತಿ ಕಾಣುತ್ತದೆ.
- ಹಾಗೆಯೇ ಪಕ್ಕದಲ್ಲಿಯೇ 'ಕ್ಲಿಯರ್' ಹಿಸ್ಟರಿ ಆಯ್ಕೆಯು ಸಹ ಕಾಣುತ್ತದೆ.
- ಅದನ್ನು ಒತ್ತಿದರೆ ಮತ್ತೊಂದು ವಿಂಡೊ ತೆರೆದುಕೊಳ್ಳುತ್ತದೆ. ಅಲ್ಲಿ ಕಾಣುವ ಕ್ಲಿಯರ್ ಹಿಸ್ಟರಿ ಬಟನ್ ಒತ್ತುವ ಮೂಲಕ ಚಲನವಲನ ಟ್ರ್ಯಾಕ್ ಮಾಡುವುದಕ್ಕೆ ಕಡಿವಾಣ ಹಾಕಬಹುದು.

■ **ಶಶಿಕುಮಾರ್ ಸಿ.**

ಫೇಸ್‌ಬುಕ್ ವೀಕ್ಷಣೆಯಲ್ಲಿ ತೊಡಗಿದ್ದಾಗ ಕಾಣುವ ಯಾವುದೋ ಒಂದು ವಿಷಯದ ವಿಡಿಯೊ, ಸುದ್ದಿ, ಚಿತ್ರಗಳನ್ನು ಲೈಕ್ ಮಾಡಿದರೆ ಅಥವಾ ಅಲ್ಲಿ ಕಾಣುವ ಲಿಂಕ್‌ಗಳನ್ನು ಒತ್ತಿದರೆ ಆ ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತಹ ಜಾಹೀರಾತುಗಳು ಕಾಣಿಸಿಕೊಂಡು ಕಾಡಲಾರಂಭಿಸುತ್ತವೆ. ಇದಕ್ಕೆ ಕಡಿವಾಣ ಹಾಕುವುದಾಗಿ ಈ ಹಿಂದೆಯೇ ಫೇಸ್‌ಬುಕ್ ಹೇಳಿತ್ತು. ಅಂತೆಯೇ 'ಆಫ್ ಫೇಸ್‌ಬುಕ್ ಆಕ್ಟಿವಿಟಿ' ಹೊಸ ಆಯ್ಕೆಯೊಂದನ್ನು ಫೇಸ್‌ಬುಕ್ ಪ್ರಸ್ತುತಪಡಿಸಿದೆ.

ಇದು ಫೇಸ್‌ಬುಕ್ ಬಳಕೆದಾರರಿಗೆ ಅತ್ಯಂತ ಕಿರಿಕಿರಿಯನ್ನುಂಟು ಮಾಡುವ ವಿಚಾರ ಆಗಿತ್ತು. ಯಾವುದೋ ಒಂದು ಫೋಟೊ, ವಿಡಿಯೊ, ಸುದ್ದಿಯನ್ನು ಲೈಕ್ ಮಾಡಿದರೆ ಅದಕ್ಕೆ ಸಂಬಂಧಿಸಿದ ಜಾಹೀರಾತುಗಳು ಬಳಕೆದಾರರ ಒಪ್ಪಿಗೆ ಇಲ್ಲದೇ ಕಾಣುವುದಕ್ಕೆ ಸಾಕಷ್ಟು ಆಕ್ಷೇಪವೂ ವ್ಯಕ್ತವಾಗಿತ್ತು. ಇದರಿಂದ ಎಚ್ಚೆತ್ತ ಫೇಸ್‌ಬುಕ್‌ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮಾರ್ಕ್ ಜುಗರ್‌ಬರ್ಗ್, ಸಮಸ್ಯೆಯನ್ನು ಬಗೆಹರಿಸುವುದಾಗಿ ಈ ಹಿಂದೆಯೇ ಹೇಳಿದ್ದರು.



ಮಾರ್ಕ್ ಜುಕರ್‌ಬರ್ಗ್

'ಆಫ್ ಫೇಸ್‌ಬುಕ್ ಆಕ್ಟಿವಿಟಿ' ಅನ್ನೋದು ಒಂದು ಹೊಸ ಫೀಚರ್. 'ಕ್ಲಿಯರ್ ಹಿಸ್ಟರಿ' ಆಯ್ಕೆಯ ಪರ್ಯಾಯವಾಗಿ ಈ ಹೊಸ ಫೀಚರ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಬಳಕೆದಾರರು ತಮ್ಮ ಖಾತೆಯ ಮೂಲಕ ಫೇಸ್‌ಬುಕ್‌ನಲ್ಲಿ ಹುಡುಕುವ, ವೀಕ್ಷಣೆ ಮಾಡುವ ಪ್ರತಿ ಮಾಹಿತಿಯೂ ಟ್ರ್ಯಾಕ್ ಆಗುತ್ತಿರುತ್ತದೆ. ಟ್ರ್ಯಾಕ್ ಆದ ಮಾಹಿತಿಯು ಥರ್ಡ್ ಪಾರ್ಟಿ ಕಂಪನಿಗಳಿಗೆ ಫೇಸ್‌ಬುಕ್ ವತಿಯಿಂದಲೇ ಲಭ್ಯವಾಗುತ್ತದೆ. ಆ ಥರ್ಡ್ ಪಾರ್ಟಿ ಕಂಪನಿಗಳು ತಮ್ಮ ಉತ್ಪಾದನೆಯ ಪ್ರಮೋಷನ್ ಅಥವಾ ತಮ್ಮ ಪ್ರಚಾರಕ್ಕಾಗಿ ಜಾಹೀರಾತುಗಳನ್ನು ಪ್ರಸಾರ ಮಾಡುತ್ತವೆ. ಅವು ಬಳಕೆದಾರರ ಫೇಸ್‌ಬುಕ್ ಫೀಡ್ ವಿಭಾಗದಲ್ಲಿ ಕಾಣಿಸಿಕೊಳ್ಳುತ್ತವೆ.



ಈ ಕಿರಿಕಿರಿಯಿಂದ ಮುಕ್ತಿ ಪಡೆಯಲು ಈ ಮುಂಚೆ ಯಾವುದೇ ಆಯ್ಕೆ ಇರಲಿಲ್ಲ. ಅದಕ್ಕಾಗಿಯೇ ಫೇಸ್‌ಬುಕ್ 'ಆಫ್ ಫೇಸ್‌ಬುಕ್ ಆಕ್ಟಿವಿಟಿ'ಯನ್ನು ಪರಿಚಯಿಸಿರುವುದು. ಈ ಆಯ್ಕೆಯನ್ನು ಆನ್ ಮಾಡುವುದರ ಮೂಲಕ ಬಳಕೆದಾರರು ತಮ್ಮ ಖಾತೆಯ ಮೂಲಕ ಹುಡುಕುವ ಮಾಹಿತಿಯ ಹಿಸ್ಟರಿಯನ್ನು ಡಿಲೀಟ್ ಮಾಡಬಹುದು. ಈ ಆಯ್ಕೆಯು ಐರ್ಲೆಂಡ್ ಮತ್ತು ದಕ್ಷಿಣ ಕೊರಿಯಾ ದೇಶಗಳಲ್ಲಿ ಮಾತ್ರ ಲಭ್ಯವಿತ್ತು. ಆದರೆ ಈಗ ಈ ಸೇವೆಯನ್ನು ಫೇಸ್‌ಬುಕ್ ಎಲ್ಲರಿಗೂ ಒದಗಿಸಿದೆ.

### ಖಾಸಗೀತನಕ್ಕೂ ಧಕ್ಕೆ ಸಂಭವ

ಥರ್ಡ್‌ಪಾರ್ಟಿ ಸೈಟ್‌ಗಳಿಗೆ ಬಳಕೆದಾರರು ಭೇಟಿ ನೀಡುವುದರಿಂದಲೇ, ಅವರ ಸರ್ಚ್ ಟ್ರ್ಯಾಕ್ ಮಾಹಿತಿ ಆಧಾರದ ಮೇಲೆ ಜಾಹೀರಾತುಗಳು ಫೇಸ್‌ಬುಕ್ ಗೋಡೆಯ ಮೇಲೆ ಕಾಣಿಸಿಕೊಳ್ಳುತ್ತವೆ. ಅದರಿಂದಾಗಿ ಕೆಲವೊಮ್ಮೆ ಮಾಹಿತಿ ಸೋರಿಕೆಯಾಗುವ ಸಾಧ್ಯತೆಗಳಿದ್ದವು. ಟ್ರ್ಯಾಕ್ ಮಾಡುವುದರಿಂದ ಅವರ ಖಾಸಗಿತನಕ್ಕೆ ಧಕ್ಕೆ ಹಾಗೂ ಭದ್ರತೆ ಲೋಪವೂ ಸಂಭವಿಸುವ ಸಾಧ್ಯತೆ ಇತ್ತು. ಹೀಗಾಗಿ ಟ್ರ್ಯಾಕ್ ಮಾಡುವುದಕ್ಕೆ ಕಡಿವಾಣ ಹಾಕುವುದರಿಂದ ಪರೋಕ್ಷವಾಗಿ ಬಳಕೆದಾರರ ಖಾಸಗಿತನ ಹಾಗೂ ಭದ್ರತಾ ಲೋಪವಾಗದಂತೆ ತಡೆಯಲು ಸಾಧ್ಯವಾಗುತ್ತದೆ. ■